# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1082**

ಸದಸ್ಯರ ಹೆಸರು : ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ : 17-03-2025

ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

***

| ಪ್ರಶ್ನೆ | | ಉತ್ತರ |
|---|---|---|
| ಅ) | ಕೃಷಿ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಪಡೆಯಲು ಇದ್ದ ಯು.ಎನ್.ಐ.ಪಿ. ಮತ್ತು ಶೀಘ್ರ ವಿದ್ಯುತ್ ಯೋಜನೆಗಳನ್ನು ರದ್ದುಗೊಳಿಸಲಾಗಿದೆಯೇ; ರದ್ದುಗೊಳಿಸ ಲಾಗಿದ್ದರೆ ಕಾರಣಗಳೇನು; ಈ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ಪಡೆಯಲು ತಗಲುತ್ತಿದ್ದ ವೆಚ್ಚವೆಷ್ಟು; | ರಾಜ್ಯದಲ್ಲಿ ನೀರಾವರಿ ಪಂಪ್‌ಸೆಟ್‌ಗಳನ್ನು ವಿದ್ಯುತ್ ಜಾಲಕ್ಕೆ ವ್ಯವಸ್ಥಿತವಾಗಿ ಸೇರ್ಪಡೆಗೊಳಿಸಲು ಮತ್ತು ಸೌರ ವಿದ್ಯುತ್ತನ್ನು ಸಮರ್ಪಕವಾಗಿ ಬಳಸಲು stand-alone / off grid ಸೋಲಾರ್ ಪಂಪ್‌ಸೆಟ್‌ಗಳನ್ನು ಹಾಗೂ IP set ಫೀಡರ್‌ಗಳ ಸೌರೀಕರಣವನ್ನು ಅನುಷ್ಠಾನಗೊಳಿಸಿ ರೈತರ ಪಂಪ್‌ಸೆಟ್‌ಗಳಿಗೆ ಹಗಲಿನ ವೇಳೆ ವಿದ್ಯುತ್ ಸೌಕರ್ಯ ಕಲ್ಪಿಸಲು ಸರ್ಕಾರಿ ಆದೇಶ ಸಂಖ್ಯೆ: ಎನರ್ಜಿ/ವಿಎಸ್‌ಸಿ/ 214/2023, ಬೆಂಗಳೂರು, ದಿನಾಂಕ: 07.10.2023 ರನ್ವಯ, ದಿನಾಂಕ: 22.09.2023 ರ ನಂತರ ನೊಂದಾಯಿಸಲ್ಪಡುವ IP ಸೆಟ್‌ಗಳಿಗೆ ಚಾಲ್ತಿಯಲ್ಲಿರುವ ನಿಯಮಗಳಿಗನುಗುಣವಾಗಿ ಆಯಾಯ ಎಸ್ಕಾಂಗಳಿಂದ ಸಂಪರ್ಕ ಕಲ್ಪಿಸಲು ಕ್ರಮ ವಹಿಸಲಾಗುವುದು.<br><br>ದಿನಾಂಕ 22.09.2023ರ ನಂತರ ನೋಂದಣಿಗೊಳ್ಳುವ ರೈತರುಗಳಿಗೆ ಯು.ಎನ್.ಐ.ಪಿ ಮತ್ತು ಶೀಘ್ರ ಸಂಪರ್ಕ ಯೋಜನೆಗಳಡಿಯಲ್ಲಿ ವಿದ್ಯುತ್ ಸೌಕರ್ಯ ಕಲ್ಪಿಸಲು ಅವಕಾಶವಿರುವುದಿಲ್ಲ.<br>ಈ ಹಿಂದೆ ಯು.ಎನ್.ಐ.ಪಿ ಮತ್ತು ಶೀಘ್ರ ವಿದ್ಯುತ್ ಯೋಜನೆಯಡಿ ವಿದ್ಯುತ್ ಸಂಪರ್ಕ ಪಡೆದುಕೊಳ್ಳಲು ಮೂಲಭೂತ ಸೌಕರ್ಯ ಶುಲ್ಕ ರೂ.10,000/- ಹಾಗೂ ಇತರೆ ಠೇವಣಿಗಳನ್ನು ಪಾವತಿಸಿಕೊಳ್ಳಲಾಗುತ್ತಿತ್ತು. |
| ಆ) | ಪ್ರಸ್ತುತ ಕೊರೆಸಲಾಗುವ ಕೃಷಿ ಕೊಳವೆ ಬಾವಿಗೆ ಯಾವ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ನೀಡಲಾಗುತ್ತಿದೆ; ಇದಕ್ಕೆ ತಗಲುವ ವೆಚ್ಚವೆಷ್ಟು; | ಈಗಾಗಲೇ ನೋಂದಣಿಗೊಂಡು ಮೂಲಸೌಕರ್ಯ ರಚನೆಗೆ ಕಾಯುತ್ತಿರುವ ಅಥವಾ ಹೊಸದಾಗಿ ನೋಂದಣಿಗೊಳ್ಳುವ ಪಂಪ್ ಸೆಟ್‌ಗಳು, ವಿದ್ಯುತ್ ಜಾಲದಿಂದ 500 ಮೀಟರ್‌ಯಿಂದಾಚೆ ಇದ್ದಲ್ಲಿ stand-alone/ off-grid solar ಪಂಪ್ ಸೆಟ್ ಅಳವಡಿಸಲು ಸೂಚಿಸಿದೆ. ಸೌರ ಪಂಪ್ ಸೆಟ್‌ಗಳನ್ನು ಉತ್ತೇಜಿಸಲು ಕೇಂದ್ರ ಸರ್ಕಾರದಿಂದ ಶೇ.30 ರಷ್ಟು ಸಹಾಯಧನ ಅಲ್ಲದೆ ರಾಜ್ಯ ಸರ್ಕಾರದಿಂದ ಶೇಕಡ 30 ರಷ್ಟು ಇರುವ ಸಹಾಯ ಧನವನ್ನು ಶೇಕಡ 50 ಕ್ಕೆ ಹೆಚ್ಚಿಸಿ ಸರ್ಕಾರ ಅನುಮೋದಿಸಿದೆ. ರೈತರು ಈಗಾಗಲೇ ವಿದ್ಯುತ್ ಸಂಪರ್ಕಕ್ಕಾಗಿ ಮೊತ್ತವನ್ನು ಪಾವತಿಸಿದ್ದರೆ, ಪಾವತಿಸಿದ ಮೊತ್ತವನ್ನು ರೈತರ ವಂತಿಗೆ ಎಂದು ಪರಿಗಣಿಸಿ, ಸೌರ ಪಂಪ್ ಸೆಟ್‌ಗಳನ್ನು ಅಳವಡಿಸುವುದು ಎಂದು ಆದೇಶಿಸಲಾಗಿರುತ್ತದೆ. |

<table>
<tr>
<td></td>
<td></td>
<td>
ವಿದ್ಯುತ್ ಸರಬರಾಜು ಕಂಪನಿಗಳ ವ್ಯಾಪ್ತಿಯಲ್ಲಿ ರೈತರ ಪ್ರತಿ ಪಂಪ್ ಸೆಟ್‌ಗೆ ಪಾವತಿಸಬೇಕಾದ ಶುಲ್ಕದ ವಿವರಗಳು ಈ ಕೆಳಕಂಡಂತೆ ಇರುತ್ತದೆ.
<ol>
<li>ಅರ್ಜಿ ಶುಲ್ಕ : ರೂ.50/- + ಜಿ.ಎಸ್.ಟಿ. ಮೊತ್ತ</li>
<li>ಮೇಲ್ವಿಚಾರಣಾ ಶುಲ್ಕ ರೂ. 150/- + ಜಿ.ಎಸ್.ಟಿ. ಮೊತ್ತ (ಸರ್ವಿಸ್ ಮೇನ್ಸ್ ಮುಖಾಂತರ ವಿದ್ಯುತ್ ಸಂಪರ್ಕ ಕಲ್ಪಿಸಲು)</li>
<li>ಮೇಲ್ವಿಚಾರಣಾ ಶುಲ್ಕ ಅಂದಾಜು ಪಟ್ಟಿಯ ಮೇಲೆ 5% + ಜಿ.ಎಸ್.ಟಿ. ಮೊತ್ತ.</li>
<li>ಆರಂಭಿಕ ಠೇವಣಿ ಶುಲ್ಕ (ಪ್ರತಿ ಹೆಚ್.ಪಿ.ಗೆ)</li>
</ol>
<table>
<tr><th>ಬೆಸ್ಕಾಂ</th><th>ಮೆಸ್ಕಾಂ</th><th>ಸೆಸ್ಕ್</th><th>ಹೆಸ್ಕಾಂ</th><th>ಜೆಸ್ಕಾಂ</th></tr>
<tr><td>1700/-</td><td>1380/-</td><td>1480/-</td><td>1480/</td><td>1624/-</td></tr>
</table>
</td>
</tr>
<tr>
<td>ಇ)</td>
<td>ಯು.ಎನ್.ಐ.ಪಿ. ರದ್ದತಿಯಾದ ನಂತರ ಕೃಷಿ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕ ಪಡೆಯುವುದು ದುಬಾರಿಯಾಗಿದ್ದು, ರೈತರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಮತ್ತೊಮ್ಮೆ ಸದರಿ ಯೋಜನೆಯನ್ನು ಜಾರಿಗೆ ತರಲಾಗುವುದೇ; ಇಲ್ಲದೇ ಇದ್ದಲ್ಲಿ ರೈತರಿಗೆ ಕಡಿಮೆ ವೆಚ್ಚದಲ್ಲಿ ವಿದ್ಯುತ್ ಸಂಪರ್ಕ ನೀಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?</td>
<td>ಈ ಕುರಿತು ಸರ್ಕಾರದಲ್ಲಿ ಪ್ರಸ್ತಾವನೆ ಇರುವುದಿಲ್ಲ.</td>
</tr>
</table>

ಸಂಖ್ಯೆ: ಎನರ್ಜಿ 66 ಇಬಿಎಸ್ 2025

(ಕೆ.ಜೆ.ಜಾರ್ಜ್)
ಇಂಧನ ಸಚಿವರು